ಈ ಕೆಳಗಿನ ಪುರಸಭೆ ಪಟ್ಟಣ ಪಂಚಾಯತ್ ಸ್ಥಳಗಳಿಗೆ ನೀರು ಸರಬರಾಜು ಯೋಜನೆಗಳನ್ನು ತಯಾರಿಸಲಾಗಿದ್ದು ಮಂಜೂರಾತಿಗೆ ಸಲ್ಲಿಸಿರುತ್ತದೆ.

1. ಬಾದಾಮಿ ಪಟ್ಟಣ 2. ಬಸವನ ಬಾಗೇವಾಡಿ

ಈ ಕೆಳಗಿನ ಪುರಸಭೆ, ಪಟ್ಟಣ ಪಂಚಾಯತ್ ಸ್ಥಳಗಳಿಗೆ ಹೊಸ ಯೋಜನೆಗಳನ್ನು ತಯಾರಿಸಲಾಗುತ್ತಿದೆ.

1. ಮುಧೋಳ (ಘಟಪ್ರಭಾ ನದಿ) 2. ಬೀಳಗಿ (ಕೃಷ್ಣಾನದಿ)

ಮಹಾಲಿಂಗಪುರ ಪಟ್ಟಣಕ್ಕೆ ನದಿ ಮೂಲದಿಂದ ಯೋಜನೆಯನ್ನು ತಯಾರಿಸುವ ಬಗ್ಗೆ ಪುರಸಭೆಯಿಂದ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ.

45(210)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ ಎಷ್ಟು ವರ್ಷಗಳಿಂದ ಜಾರಿಯಲ್ಲಿ ಇದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಪೂರ್ತಿಯಾಗಿದೆ; ಎಷ್ಟು ಅನುದಾನ ಬಿಡುಗಡೆಯಾಗಿದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಗಂಗಾ ಕಲ್ಯಾಣ ಯೋಜನೆಯನ್ನು ದಿನಾಂಕ 2-1-96ರಿಂದ ಅನುಷ್ಠಾನಗೊಳಿಸುತ್ತಿದೆ.

ಆ) ದಿನಾಂಕ 3-1-96 ರಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವಹಿಸಿಕೊಂಡಿರುತ್ತದೆ.

ಇ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ. ಆದುದರಿಂದ ಅನುದಾನವನ್ನು ಸಹ ಬಿಡುಗಡೆ ಮಾಡಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಸಮಾಜ ಕಲ್ಯಾಣ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ.

46(221)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ-ನಿಲಯಗಳು ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು);

ಆ) ಸರ್ಕಾರದವರು ಇಂತಹ ವಿದ್ಯಾರ್ಥಿನಿಲಯಗಳಿಗೆ ಒದಗಿಸುತ್ತಿರುವ ಸೌಲಭ್ಯಗಳೇನು;

ಇ) ಅಲ್ಲಿನ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳು ಪಠ್ಯಪುಸ್ತಕಗಳನ್ನು ಇನ್ನೂ ಸಹ ಒದಗಿಸದಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಅವುಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸಮಾಜ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ 956 ಮೆಟ್ರಿಕ್‌ಪೂರ್ವ ಹಾಗೂ 143 ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು ಮತ್ತು 79 ಆಶ್ರಮ ಹಾಗೂ 88 ವಸತಿ ಶಾಲೆಗಳನ್ನು ನಿರ್ವಹಿಸುತ್ತಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಆ) ಸರ್ಕಾರಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1. ಭೋಜನ 2. ಇತರೆ ವೆಚ್ಚ (ಎಣ್ಣೆ,ಸೋಪು, ಇತ್ಯಾದಿ) 3. ಉಡುಪು 4. ಪಠ್ಯಪುಸ್ತಕ, ಲೇಖನಸಾಮಗ್ರಿ 5. ಕ್ಷೌರದ ವೆಚ್ಚ (ಬಾಲಕರಿಗೆ) 6. ವಾರ್ತಾಪತ್ರಿಕೆ, ನಿಯತಕಲಿಕೆ 7. ವೈದ್ಯಕೀಯ ಸೌಲಭ್ಯ.

ಸರ್ಕಾರಿ ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ 400.00 ರೂಗಳಂತೆ ನೀಡಲಾಗುತ್ತಿದೆ.

ಆಶ್ರಮ ಶಾಲೆಗಳು:ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1. ಭೋಜನ 2. ಇತರೆ ವೆಚ್ಚ 3. ಪಠ್ಯಪುಸ್ತಕ-ಲೇಖನ ಸಾಮಗ್ರಿ 4. ಉಡುಪು 5. ಕ್ಷೌರ (ಬಾಲಕರಿಗೆ) 6. ವೈದ್ಯಕೀಯ ಸೌಲಭ್ಯ.

ಇ) ಪಠ್ಯಪುಸ್ತಕಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಒದಗಿಸಲು ಜಿಲ್ಲಾ ಪಂಚಾಯತ್‌ಗಳು ಸೂಕ್ತ ಕ್ರಮ ತೆಗೆದುಕೊಂಡಿವೆ.

ಸಮವಸ್ತ್ರಗಳನ್ನು ಒದಗಿಸಲು ವಿಳಂಬವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಈ) ಹೌದು.

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮಶಾಲೆ: ವಸತಿ ಶಾಲೆಗಳ ಜಿಲ್ಲಾವಾರು ವಿವರ.

ಕ್ರ. ಸಂ.	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	ಆಶ್ರಮ ಶಾಲೆಗಳು	ವಸತಿ ಶಾಲೆಗಳು
1.	ಬೆಂಗಳೂರು (ಗ್ರಾಮಾಂತರ)	43	2	4	2
2.	ಬೆಂಗಳೂರು (ನಗರ)	30	8	1	2
3.	ಚಿತ್ರದುರ್ಗ	55	14	-	3
4.	ಕೋಲಾರ	62	14	-	3
5.	ತುಮಕೂರು	51	15	1	2
6.	ಶಿವಮೊಗ್ಗ	45	5	3	3
7.	ಮೈಸೂರು	63	15	29	3
8.	ಮಂಡ್ಯ	38	5	1	1
9.	ಹಾಸನ	47	3	-	4
10.	ಚಿಕ್ಕಮಗಳೂರು	30	5	5	2
11.	ಕೊಡಗು	27	3	14	1
12.	ದಕ್ಷಿಣ ಕನ್ನಡ	42	3	18	1
13.	ಬೆಳಗಾಂ	50	2	-	4
14.	ಬಿಜಾಪುರ	70	4	1	10
15.	ಧಾರವಾಡ	69	7	-	10
16.	ಉತ್ತರ ಕನ್ನಡ	27	1	-	3
17.	ಗುಲ್ಬರ್ಗಾ	75	13	1	15
18.	ರಾಯಚೂರು	50	8	-	8
19.	ಬಳ್ಳಾರಿ	48	5	1	3
20.	ಬೀದರ್	34	11	-	8
	ಒಟ್ಟು	956	143	79	88